**ಎಂ.ವಿ.ಸಿ. ನಂ. 265 / 2023**
**ಪಿ. ಡಬ್ಲ್ಯೂ 1.**

**ದಿನಾಂಕಃ 02-04-2025**

ಸಾಕ್ಷಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರ ಪರಃ ವಕೀಲರಾದ ಃ ಶ್ರೀ.ಎಸ್.ಬಿ. ರವರಿಂದ ಃ

ಈ ಅರ್ಜಿಯಲ್ಲಿ ನಾನು ಅರ್ಜಿದಾನಾಗಿದ್ದು, ಇಂದು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿ ಮತ್ತು ನಿಜ ಇರುತ್ತದೆ. ಅವುಗಳನ್ನು ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ.

ಈ ಕೆಳಗಿನ ದಾಖಲೆಗಳನು ಹಾಜರುಪಡಿಸಿರುತ್ತೇನೆ.

1. ಪ್ರ.ದ.ವರದಿಯ ದೃಡೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು.

2. ದೂರನ್ನು ದೃಡೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

3. ಅಂತಿಮ ವರದಿಯ ದೃಡೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 3 ಗುರುತಿಸಲಾಯಿತು.

4. ಅಪಘಾತ ಸ್ಥಳದ ಪಂಚನಾಮೆಯ ದೃಡೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 4 ಎಂದು ಗುರುತಿಸಲಾಯಿತು.

5. ಮೋಟಾರು ವಾಹನದ ದೃಡೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯಿತು.

6. ಗಾಯದ ಪ್ರಮಾಣ ಪತ್ರದ ದೃಡೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 6 ಎಂದು ಗುರುತಿಸಲಾಯಿತು.

7. ಆಸ್ಪತ್ರೆಯ ಬಿಡುಗಡೆ ಪತ್ರವನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 7 ಎಂದು ಗುರುತಿಸಲಾಯಿತು..

8. ಅಂಗನ್ಯೂನತೆ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 8 ಎಂದು ಗುರುತಿಸಲಾಯಿತು.

9. ಕ್ಷ-ಕಿರಣ ವರದಿಯನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 9 ಎಂದು ಗುರುತಿಸಲಾಯಿತು.

10. 55 ಹಣ ತುಂಬಿದ ವೈದ್ಯಕೀಯ ರಸೀದಿಗಳನ್ನು ಹಾಜರುಪಡಿಸಿರುತ್ತಾರೆ ಅವುಗಳನ್ನು ನಿಪಿ 10 ಎಂದು ಗುರುತಿಸಲಾಯಿತು.

11. ಕ್ಷ-ಕಿರಣ ಚಿತ್ರವನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 11 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೋರಿಕೊಂಡಂತೆ ಆದೇಶಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಾದ ಶ್ರೀ.ಟಿ.ಜಿ.ಕೆ.ರವರಿಂದಃ**

ದಿನಾಂಕಃ 21.05.2023 ರಂದು ಅಪಘಾತ ಆಗಿರುತ್ತದೆ. ನಾನು ದ್ವಿಚಕ್ರ ವಾಹನದ ಮೂಲಕ ಯಾದಗಿರಿದಿಂದ ಶಹಾಪೂರಕ್ಕೆ ಹೋಗುತ್ತಿದ್ದೆ. ಸದರಿ ದ್ವಿಚಕ್ರ ವಾಹನವನ್ನು ಸೋಫಿಯರವರು ಚಲಾಯಿಸುತ್ತಿದ್ದರು. ಸದರಿ ದ್ವಿಚಕ್ರ ವಾಹನದ ನಂಬರ ಕೆಎ-32-2030 ಇರುತ್ತದೆ. ಸದರಿ ದ್ವಿಚಕ ವಾಹನದ ಚಾಲಕನು ಚಾಲನಾ ಪರವಾನಿಗೆ

ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದನ್ನು ಅದನ್ನು ಹಾಜರುಪಡಿಸಿರುತ್ತೇನೆ ಅಪಘಾತ ಆದಾಗ ದ್ವಿಚಕ್ರ ವಾಹನದ ಚಾಲಕನು ದ್ವಿತೀಯ ಪಿಯು.ಸಿ ಮುಗಿಸಿದ್ದನ್ನು ಹಾಗೂ ಆತನ್ನು ಸಿ.ಇ.ಟಿ ಪರೀಕ್ಷೆಯನ್ನು ಬರೆದಿದ್ದನ್ನು. ಸಿ.ಇ.ಟಿ ಪರೀಕ್ಷೆಯನ್ನು ಯಾದಗಿರಿ ಯಾವ ಕಾಲೇಜಿನಲ್ಲಿ ಬರೆದಿರುತ್ತೇವೆ ಎಂದು ನನಗೆ ನೆನಪಿರುವುದಿಲ್ಲ. ಅಪಘಾತ ಸ್ಥಳವು ನನಗೆ ಗೊತ್ತಿರುವುದಿಲ್ಲ ಆದರೆ ಸೋಪಿಯಗೆ ಗೊತ್ತಿರುತ್ತದೆ. ಅಪಘಾತ ಆದಾಗ ನಾನು ದ್ವಿಚಕ್ರ ವಾಹನದ ಮೇಲೆ ಇದ್ದೆ. ದ್ವಿಚಕ್ರ ವಾಹನದ ಮೇಲೆ ನಾವು 3 ಜನರು ಪ್ರಯಾಣಿಸುತ್ತಿದ್ದೇವುಎಂದರೆ ಸರಿ. ಸದರಿ ಮೂರು ಜನರ ಹೆಸರು ಸೋಫಿಯ, ನಾನು, ಆಯನ್ ಇರುತ್ತವೆ.

ಅಪಘಾತ ಸ್ಥಳದಲ್ಲಿ ರಸ್ತೆ ವಿಭಾಜನೆಯ ಇರುತ್ತವೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ಬರುವ ವಾಹನಗಳಿಗೆ ಒಂದು ರಸ್ತೆ ಇದೇ ಹಾಗೂ ಹೋಗುವ ವಾಹನಗಳಿಗೆ ಇನ್ನೊಂದು ರಸ್ತೆ ಇದೇ ಎಂದರೆ ಸರಿ. ಸೋಫಿಯನೇ ಕಾರು ಹೋಗುತ್ತಿದ್ದ ರಸ್ತೆಗೆ ಹೋಗಿ ದ್ವಿಚಕ್ರ ವಾಹನವನ್ನು ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸೋಪಿಯನ ತಪ್ಪಿ ನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಕಾರಿನ ಚಾಲಕನ ತಪ್ಪಿ ನಿಂದ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಅಪಘಾತದಿಂದ ನನ್ನ ಕಾಲು ಮುರಿದಿರುತ್ತದೆ, ಅದೇ ರೀತಿ ನನ್ನ ಬೆನ್ನಿಗೆ ಮತ್ತು ಭುಜಕ್ಕೆ ಸಹ ಪೆಟ್ಟಾಗಿರುತ್ತದೆ. ಅಪಘಾತ ಆದ ನಂತರ ಯಾದಗಿರಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಕಲಬುರಗಿಯ ಕಾಮರೆಡ್ಡಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ಕಾಮರೆಡ್ಡಿ ಆಸ್ಪತ್ರೆಯಲ್ಲಿ 1 ವಾರದ ವರೇಗೆ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ಒಂದು ವಾರಗಳ ವರೇಗೆ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಈಗ ನಾನು ದ್ವಿತೀಯ ಅಭಿಯಂತರ ಪದವಿಯಲ್ಲಿ ಓದುತ್ತಿದ್ದೇನೆ. ನಾನು ಪ್ರತಿ ತಿಂಗಳ ಹಾಲು ಮಾರಾಟ ಮಾಡಿ 30 ಸಾವಿರ ರೂಪಾಯಿ ಪಡೆಯುತ್ತಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಹಾಲು ಮಾರಾಟ ಮಾಡುತ್ತಿದ್ದೆ ಎಂದು ತೋರಿಸಲು ನಾನು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಕಾಲೇಜಿಗೆ ಹೋಗುತ್ತಿದ್ದಕಾರಣ ನನಗೆ ಯಾವುದೇ ಆದಾಯ ಇರುಲಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಅಂಗನ್ಯೂನತೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ವೈಧ್ಯಕೀಯ ದಾಖಲೆಗಳನ್ನು ಮತ್ತು ಹಣ ತುಂಬಿದ ರಸೀದಿಗಳನ್ನು ತಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. 5 ಲಕ್ಷ ವೈಧ್ಯಕೀಯ ಖರ್ಚು ಆಗಿರುತ್ತದೆ ಎಂದು ನಾನು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಇನ್ನು ಹೆಚ್ಚಿನ 2 ವರೇ ಲಕ್ಷ ವೈಧ್ಯಕೀಯ ಖರ್ಚು ಬೇಕಾಗಿರುತ್ತದೆ ಎಂದು ನಾನು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿವರುಷ್ಟು ಪರಿಹಾರವನ್ನು ಪಡೆಯಲು ಅರ್ಹನು ಇರುವುದಿಲ್ಲ ಎಂದರೆ ಸರಿಯಲ್ಲ.

ಕಾರಿನ ಚಾಲಕನು ಚಾಲನಾ ಪರವಾನಿಗೆ ಪತ್ರ ಹೊಂದಿರಲಿಲ್ಲ ಎಂದರೆ ಸರಿಯಲ್ಲ ಕಾರಿನ ಮಾಲೀಕನು ವಿಮೆಯ ಷರತ್ತುಗಳನ್ನು ಉಲ್ಲಂಘನೆ ಮಾಡಿರುವ ಕಾರಣ 2 ನೇ ಎದುರುದಾರನು ಅಪಘಾತ ಪರಿಹಾರವನ್ನು ನೀಡಲು ಭಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ನೇಎದುರುದಾರರ ಪರ ವಕೀಲರಾದ ಶ್ರೀ.ಸುರೇಶ್ ಬಾಬು ರವರಿಂದಃ

1 ನೇ ಎದುರುದಾರರ ಪರ ವಕೀಲರನ್ನು ಕರೆಯಿಸಲಾಯಿತು ಅವರು ಗೈರು ಹಾಜರಿರುತ್ತಾರೆ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ